1-30 P.M.

Cases decided by Land Tribunal, Hosadurga Taluk, Chitradurga District

800. SRI K. VENKATARAMAIAH (Hosadurga).—Will the Minister for Revenue be pleased to state :—

(*a*) the number of cases disposed of in favour of tenants by the Land Tribunals in Hosadurga Taluk of Chitradurga district and the extent of land given to them for cultivation ;

(*b*) the extent of such land for which occupancy right is given to them ;

(*c*) the number of such cases in which the Tribunal has determined cultivators in accordance with the decision of the D.C., Inam Abolition ?

SRI B. BASAVALINGAPPA (Minister for Revenue).—

(*a*) 21 cases have been disposed of in favour of tenants by the Land Tribunals in Hosadurga Taluk of Chitradurga district and they have been registered as occupants of 102-25 acres of land.

(*b*) Title deeds relating to the 29 acres 7 guntas have already been given to 9 tenants.

(*c*) There are no such cases. But the land Tribunal has rejected 58 applications as they pertain to the Inam lands which come under the purview of the Inam Abolition Deputy Commissioner.

ಶ್ರೀ ಕೆ. ವೆಂಕಟರಾಮಯ್ಯ.—ಸ್ವಾಮಿ, ಖಾತೆ ಮಾಡಿರುವುದು ಎಷ್ಟು ಎಂದು ನಾನು ಕೇಳುತ್ತಿದ್ದೇನೆ.

† ಶ್ರೀ ಬಿ. ಬಸವಲಿಂಗಪ್ಪ.—ಒಟ್ಟು ಅರ್ಜಿಗಳು ಬಂದಿರುವುದು ೪೨೧. ಇದರಲ್ಲಿ ವಿಲೇವಾರಿ ಆಗಿರತಕ್ಕಂಥಾದ್ದು ೨೦೫ ಅರ್ಜಿಗಳು. ೨೧ ಗೇಣಿದಾರರಿಗೆ ೧೦೨ ಎಕರೆ ೨೫ ಗುಂಟೆ ಭೂಮಿಯನ್ನು ಮಂಜೂರು ಮಾಡಿ ಕೊಟ್ಟಿರುತ್ತೇವೆ. ೧೮೪ ಅಪ್ಲಿಕೇಷನ್ಸ್ ಏನು ಕೊಟ್ಟಿರುತ್ತಾರೆ, ಇದರ ಒಟ್ಟು ವಿಸ್ತೀರ್ಣ ೯೮೪ ಎಕರೆಗಳಾಗುತ್ತದೆ.

ಶ್ರೀ ಕೆ. ವೆಂಕಟರಾಮಯ್ಯ.—ಆರು ವರ್ಷಗಳಿಂದ ಟ್ರಿಬ್ಯುನಲ್‌ಗಳಲ್ಲಿ ಪಟ್ಟಾ ಕೊಡುವುದಕ್ಕೆ ತಡವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಬಸವಲಿಂಗಪ್ಪ.—ಒಂಭತ್ತು ಜನರು ಹಣವನ್ನು ಕೊಟ್ಟಿರುತ್ತಾರೆ. ಆದ್ದರಿಂದ ಅವರ ಹೆಸರಿಗೆ ಪಟ್ಟಾ ಕೊಟ್ಟಿರುತ್ತಾರೆ, ಉಳಿದವರು ದುಡ್ಡನ್ನು ಕೊಟ್ಟರೆ ತಕ್ಷಣವೇ ಪಟ್ಟಾ ಕೊಡಲು ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ವೆಂಕಟರಾಮಯ್ಯ.—ಟ್ರಿಬ್ಯುನಲ್‌ಗಳಲ್ಲಿ ತೀರ್ಮಾನವಾಗುವುದು ತಡವಾಗುತ್ತಿದೆ; ಆದಷ್ಟು ಬೇಗನೆ ತೀರ್ಮಾನವನ್ನು ಕೈಗೊಳ್ಳುವ ಪ್ರಯತ್ನವನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ?

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮನ್ನೇ ಟ್ರಿಬ್ಯುನಲ್ ಮೆಂಬರ್ ಮಾಡುತ್ತೇವೆ. ಆಗ ಬೇಗನೆ ತೀರ್ಮಾನ ಮಾಡಿ.